> https://www.suddimoola.in
> https://epaper.suddimoola.in

• ಬೆಂಗಳೂರು • ಬೆಂಗಳೂರು ಗ್ರಾಮಾಂತರ • ಚಿಕ್ಕಬಳ್ಳಾಪುರ • ಮೈಸೂರು • ರಾಯಚೂರು • ಕೊಪ್ಪಳ • ಯಾದಗಿರಿ • ಕಲಬುರಗಿ • ಬಳ್ಳಾರಿ • ವಿಜಯನಗರ • ಬೀದರ

facebook.com/Suddi Moola
twitter.com/@suddimoola22

ಸುದ್ದಿಮೂಲ

## ಮೊದಲನೇ ಪುಟದಿಂದ

# ಪಥಸಂಚಲನಕ್ಕೆ ಹೈಕೋರ್ಟ್ ಅನುಮತಿ

300 ಜನ ಗಣವೇಷಧಾರಿ ಸ್ವಯಂಸೇವಕರು ಹಾಗೂ 50 ಜನ ಘೋಷ ವಾದಕರು ಪಥಸಂಚಲನದಲ್ಲಿ ಭಾಗಿಯಾಗುವಂತೆ ಅವಕಾಶ ನೀಡಿ ಆದೇಶಿಸಿದೆ.

ಪಥಸಂಚಲನ ಕುರಿತು ನ್ಯಾಯಾಲಯಕ್ಕೆ ಮಾಹಿತಿ ನೀಡಿದ ಜಿಲ್ಲಾಡಳಿತ, 350 ಜನರ ಮಿತಿಯೊಂದಿಗೆ ನ.16ರ ಮಧ್ಯಾಹ್ನ 3.30 ರಿಂದ ಸಂಜೆ 5.30ರವರೆಗೆ (ಸೂರ್ಯಾಸ್ತದವರೆಗೆ) ಪಥಸಂಚಲನಕ್ಕೆ ಅವಕಾಶ ನೀಡಲಾಗಿದೆ. ಮಧ್ಯಾಹ್ನ 3:30ರಿಂದ ಸಂಜೆ 5:45ರ ಒಳಗಾಗಿ ಪೂರ್ಣಗೊಳಿಸಬೇಕು ಎಂದು ಕಲಬುರಗಿ ಹೈಕೋರ್ಟ್ ಪೀಠ ತಿಳಿಸಿದೆ.

ಪಥಸಂಚಲನದ ಅನುಮತಿ ಕುರಿತು ಈ ಹಿಂದೆ ಕಲಬುರಗಿಯಲ್ಲಿ ನಡೆದಿದ್ದ ಶಾಂತಿ ಸಭೆ ಯಾವುದೇ ಒಮ್ಮತವಿಲ್ಲದೆ ಅಂತ್ಯಗೊಂಡಿತ್ತು. ನಂತರ, ಹೈಕೋರ್ಟ್ ಸೂಚನೆಯಂತೆ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರ ಬೆಂಗಳೂರಿನ ಕಚೇರಿಯಲ್ಲಿ 2ನೇ ಸುತ್ತಿನ ಸಭೆ ನಡೆದಿತ್ತು. ಈ ಸಭೆಯು ಫಲಪ್ರದವಾಗಿದೆ ಎಂದು ಕಳೆದ ವಿಚಾರಣೆಯಲ್ಲಿ ನ್ಯಾಯಾಲಯಕ್ಕೆ ತಿಳಿಸಲಾಗಿತ್ತು.ಬೆಂಗಳೂರಿನ ಸಭೆಯಲ್ಲಿ ಆರ್‌ಎಸ್‌ಎಸ್‌ಮುಖಂಡರು ನವೆಂಬರ್ 13 ಅಥವಾ 16ರಂದು ಅವಕಾಶ ನೀಡುವಂತೆ ಪ್ರಸ್ತಾವನೆ ಸಲ್ಲಿಸಿದ್ದರು. ಇದರ ಹಿನ್ನೆಲೆಯಲ್ಲಿ ನ.16ಕ್ಕೆ ಅನುಮತಿ ನೀಡಿ ಹೈಕೋರ್ಟ್ ಅಂತಿಮ ಆದೇಶ ಪ್ರಕಟಿಸಿದೆ.

ಇನ್ನೂ, ಜಿಲ್ಲಾಡಳಿತದ ಆದೇಶದಂತೆ ಶಾಂತಿಯುತವಾಗಿ, ಸೌಹಾರ್ದಯುತವಾಗಿ ನಾವು ಪಥಸಂಚಲನ ನಡೆಸುತ್ತೇವೆ. ಪಥಸಂಚಲನದಲ್ಲಿ 300 ಜನ ಗಣವೇಷಧಾರಿ ಸ್ವಯಂಸೇವಕರು, 50 ಜನರ ಘೋಷವಾದ್ಯದ ತಂಡ ಭಾಗಿಯಾಗಲಿದೆ. ಪಥಸಂಚಲಕ್ಕೆ ಅನುವು ಮಾಡಿದ ಎಜೆ ಶಶಿಕಿರಣ ಶೆಟ್ಟಿ, ಜಿಲ್ಲಾಡಳಿತಕ್ಕೆ, ಪೋಲಿಸ್ ವರಿಷ್ಠಾಧಿಕಾರಿಗೆ, ತಹಶೀಲ್ದಾರರಿಗೆ ಹಾಗೂ ವಿಶೇಷವಾಗಿ ನ್ಯಾಯಾಲಯಕ್ಕೆ ಧನ್ಯವಾದ ಸಲ್ಲಿಸುತ್ತೇವೆ ಎಂದು ಆರ್‌ಎಸ್‌ಎಸ್ ಪರ ವಕೀಲ ಅರುಣ ಶ್ಯಾಂ ತಿಳಿಸಿದರು.

# ಗೇಟ್ ಅಳವಡಿಕೆಗೆ ಆದ್ಯತೆಯೋ..?

ಇದರ ಅಧಾರದ ಮೇಲೆಯೇ ಅಣೆಕಟ್ಟು ಗೇಟ್ ಬದಲಾವಣೆಯ ಜವಾಬ್ದಾರಿ ಹೊತ್ತಿರುವ ಆಂಧ್ರಪ್ರದೇಶದ ಸರ್ಕಾರ ಪೂರ್ವ ಸಿದ್ಧತೆ ಕೈಗೊಂಡು ಟೆಂಡರ್ ಪ್ರಕಿಯೆ ಪೂರ್ಣಗೊಳಿಸಿ ಗುಜರಾತ್ ಮೂಲದ ಗುತ್ತಿಗೆದಾರನಿಗೆ ಗುತ್ತಿಗೆ ವಹಿಸಿದೆ.

ಗುತ್ತಿಗೆದಾರ ಸಹ 13 ಗೇಟ್‌ಗಳನ್ನು ಈಗಾಗಲೇ ತಯಾರಿಸಿಟ್ಟುಕೊಂಡಿದ್ದು ನಾಳಿನ ಸಭೆಯ ನಿರ್ಧಾರಕ್ಕೆ ಕಾಯುತ್ತಿದ್ದಾರೆ.

ಇತ್ತ ಜಲಸಂಪನ್ಮೂಲ ಸಚಿವ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ ಈಗಾಗಲೇ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ತುಂಗಭದ್ರಾ ಜಲಾಶಯ ವ್ಯಾಪ್ತಿಯ ಕಾಲುವೆ ಭಾಗದ ಜನಪ್ರತಿನಿಧಿಗಳಿಗೆ ಜಲಾಶಯ ಅಣೆಕಟ್ಟು ಗೇಟ್ ಬದಲಾವಣೆ ಅಗತ್ಯತೆ, ಅನಿವಾರ್ಯತೆ ಮತ್ತು ವಾಸ್ತವ ಪರಿಸ್ಥಿತಿ ಮುಂಚಿತವಾಗಿಯೇ ತಿಳಿಸಿದ್ದಾರೆ.

ಸದನದಲ್ಲಿ ಈ ಬಗ್ಗೆ ಎರಡನೇ ಬೆಳೆಗೆ ನೀರಿಲ್ಲ. ಜಲಾಶಯದ ಗೇಟ್ ಬದಲಾವಣೆ ನಮ್ಮ ಆದ್ಯತೆ ಎಂದಿದ್ದಾರೆ.

ಆದರೆ, ಇದರ ನಡುವೆ ರೈತ ಮುಖಂಡರು, ಪ್ರತಿಪಕ್ಷಗಳು ಮಾತ್ರ ಪ್ರಸ್ತುತ ಇರುವ 80 ಟಿಎಂಸಿ ನೀರಿನಲ್ಲಿ ಮಾರ್ಚ್‌ವರೆಗೆ ಎರಡನೇ ಬೆಳೆಗೆ ನೀರು ಕೊಡಬಹುದು. ಒಂದು ವೇಳೆ ನೀರಿನ ಕೊರತೆಯಾದರೆ ಭದ್ರಾ ಜಲಾಶಯದಿಂದ ನೀರು ತಂದು ಎರಡನೇ ಬೆಳೆಗೆ ನೀರು ಹರಿಸಬಹುದು.

ಇತ್ತ ಡಿಸೆಂಬರ್ ಬದಲು ಜನವರಿ ಮೊದಲ ವಾರದಿಂದ ಗೇಟ್ ಅಳವಡಿಕೆ ಕೆಲಸ ಆರಂಭಿಸಿದರೆ ಗೇಟ್ ಅಳವಡಿಕೆ ಆಗಸ್ಟ್‌ವರೆಗೆ ಕೈಗೊಂಡು ಪೂರ್ಣಗೊಳಿಸಲಿ ಎಂದು ಸಲಹೆ ನೀಡಿದ್ದಾರೆ.

ಆದರೆ, ರಾಜ್ಯ ಸರ್ಕಾರ ಜುಲೈ ಅಂತ್ಯದೊಳಗೆ ಗೇಟ್ ಬದಲಾವಣೆ ಪೂರ್ಣಗೊಳಿಸಲೇಬೇಕು. ಜೂನ್‌ನಿಂದಲೇ ಮುಂಗಾರು ಆರಂಭವಾಗಿ ಜುಲೈಯೊಳಗೆ ಜಲಾಶಯಕ್ಕೆ ನೀರು ಬಂದರೆ ಗೇಟ್ ಬದಲಾವಣೆ ಕೆಲಸ ಅಪೂರ್ಣವಾಗಿ ಮತ್ತಷ್ಟು ಸಮಸ್ಯೆಗೆ ಕಾರಣವಾಗಲಿದೆ ಎಂಬ ತಾಂತ್ರಿಕ ತಜ್ಞರ ಎಚ್ಚರಿಕೆಯನ್ನು ಮುಂದಿಟ್ಟಿದೆ.

ಹಾಗಾಗಿ ಒಂದು ಕಡೆ ಕೇಂದ್ರ ಜಲ ಆಯೋಗದ ಸಲಹೆ ಮತ್ತು ಗುತ್ತೇದಾರ ಹಾಗೂ ತಾಂತ್ರಿಕ ತಜ್ಞರ ಸಲಹೆಯ ಪರಿಗಣಿಸಿ ಗೇಟ್ ಬದಲಾವಣೆಗೆ ಆದ್ಯತೆ ನೀಡಬೇಕೆ ಅಥವಾ ರೈತರ, ಪ್ರತಿಪಕ್ಷಗಳ ಒತ್ತಡಕ್ಕೆ ಮಣಿದು ಎರಡನೇ ಬೆಳೆಗೆ ನೀರು ಕೊಡಬೇಕೆ ಎನ್ನುವ ಕುರಿತು ಸೂಕ್ತ ತೀರ್ಮಾನ ಕೈಗೊಳ್ಳಬೇಕಿದೆ. ಹಾಗಾಗಿ ನಾಳಿನ ಸಭೆಯತ್ತ ಎಲ್ಲರ ಚಿತ್ತ ನೆಟ್ಟಿದೆ.

ಮತ್ತೊಂದೆಡೆ ರಾಯಚೂರು, ಕೊಪ್ಪಳ ಭಾಗದ ಜನಪ್ರತಿನಿಧಿಗಳು ಒಂದು ವೇಳೆ ರಾಜ್ಯ ಸರ್ಕಾರ ಜಲಾಶಯದ ಗೇಟ್ ಬದಲಾವಣೆಗೆ ಆದ್ಯತೆ ನೀಡಿದರೆ 72 ವರ್ಷಗಳಷ್ಟೇ ಹಳೆಯದಾದ ಕಾಲುವೆಗಳ ದುರಸ್ತಿಗೆ 200 ಕೋ.ರೂ ಬಿಡುಗಡೆ ಮಾಡುವಂತೆ ಆಗ್ರಹಿಸಿದ್ದಾರೆ.

ಕಾಲುವೆ ವ್ಯಾಪ್ತಿಯಲ್ಲಿ ಎಲ್ಲಿ, ಏನು ಸುಧಾರಣೆ ಮಾಡಬೇಕೆನ್ನುವುದು ತಾಂತ್ರಿಕ ವರದಿ ಆಧರಿಸಿ ಕಾಲುವೆ ದುರಸ್ತಿಗೆ ಇದೇ ವೇಳೆ ಆದ್ಯತೆ ನೀಡಬೇಕು. ಗೇಟ್ ಬದಲಾವಣೆ ಕೆಲಸ ಆರಂಭವಾದರೆ ಎರಡನೇ ಬೆಳೆಗೆ ನೀರಿಲ್ಲದೆ ಇರುವುದರಿಂದ ಕಾಲುವೆ ದುರಸ್ತಿಗೆ 6–7 ತಿಂಗಳ ಸಮಯಾವಕಾಶ ಇರಲಿದ್ದು, ಕಾಲುವೆ ದುರಸ್ತಿಯಾಗಲಿದೆ ಎಂದು ಸಹ ಸಲಹೆ ನೀಡಿದ್ದಾರೆ.

ಒಟ್ಟಾರೆ, ನಾಳಿನ ಸಭೆ ಎರಡನೇ ಬೆಳೆಗೊ ಅಥವಾ ಗೇಟ್ ಬದಲಾವಣೆಗೂ ಎಂಬುದು ಕುತೂಹಲ ಮೂಡಿಸಿದೆ.

**ಕೃಷ್ಣಾ ಮೇಲ್ದಂಡೆ ವ್ಯಾಪ್ತಿಯ ಐಸಿಸಿ ಸಭೆ ಇಂದು ಸಂಜೆ :** ಜಲಸಂಪನ್ಮೂಲ ಸಚಿವ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ ತುಂಗಭದ್ರಾ ಜಲಾಶಯ ವ್ಯಾಪ್ತಿಯ ನೀರಾವರಿ ಸಲಹಾ ಸಮಿತಿಯ ಸಭೆ ನಡೆಸಿದ ಬಳಿಕ ಸಂಜೆ ಕೃಷ್ಣಾ ಮೇಲ್ದಂಡೆ ಯೋಜನೆ ವ್ಯಾಪ್ತಿಯ ನೀರಾವರಿ ಸಲಹಾ ಸಮಿತಿ ಸಭೆ ನಡೆಯಲಿದೆ ಎಂದು ಗೊತ್ತಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಾರಾಯಣಪುರ ಬಲದಂಡೆ, ನಾರಾಯಣಪುರ ಎಡದಂಡೆ ನಾಲೆಗಳಿಗೆ ಹಿಂಗಾರು ಹಂಗಾಮಿಗೆ ನೀರು ಬಿಡುವ ಕುರಿತು ನಾಳೆ ನಡೆಯುವ ಸಭೆಯಲ್ಲಿ ನಿರ್ಧಾರವಾಗಲಿದೆ.

# 100ಕ್ಕೂ ಹೆಚ್ಚು ಟ್ರ್ಯಾಕ್ಟರ್ ಭಸ್ಮ

ಬೆನ್ನಲ್ಲೇ ಪ್ರತಿಭಟನೆ ಹತ್ತಿಕ್ಕಲು ಪೊಲೀಸರು ಮುಂದಾಗುತ್ತಿದ್ದಂತೆ ಕಲ್ಲು ತೂರಾಟ ನಡೆದಿದೆ. ಈ ವೇಳೆ ಬಾಗಲಕೋಟೆ ಎಎಸ್‌ಪಿ ಮಹಾಂತೇಶ್ವರ್ ಜಿದ್ದಿ ಅವರ ಕಾಲಿಗೆ ಬಲವಾಗಿ ಕಲ್ಲು ಬಿದ್ದಿದೆ. ಗಂಭೀರ ಗಾಯ ಹಿನ್ನೆಲೆ ತಕ್ಷಣ ಅವರನ್ನು ಬಾಗಲಕೋಟೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಾಗಲಕೋಟೆ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹಾಗೂ ಡಿಸಿ ಸಂಗಪ್ಪ ಜಿಲ್ಲಾ ಪಂಚಾಯತ್ ಸಿಇಓ ಶಶಿಧರ್ ಕುರೇರ ಸೇರಿದಂತೆ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಎಎಸ್‌ಪಿ ಅವರ ಆರೋಗ್ಯ ವಿಚಾರಿಸಿದ್ದಾರೆ.

**ಮೂರು ದಿನಗಳ ಕಾಲ ನಿಷೇಧಾಜ್ಞೆ ಜಾರಿ :** ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ಸಮೀರ್ವಾಡಿಯ ಗೋದಾವರಿ ಕಾರ್ಖಾನೆ ಆವರಣ ಅಕ್ಷರಶಃ ರಣರಂಗವಾಗಿತ್ತು. 100ಕ್ಕೂ ಹೆಚ್ಚು ಟ್ರ್ಯಾಕ್ಟರ್ ಟ್ರಾಲಿಗಳಿಗೆ ಬೆಂಕಿ ಹಚ್ಚಿ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸದ್ಯ ಹೋರಾಟ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಜಮಖಂಡಿ, ರಬಕವಿ-ಬನಹಟ್ಟಿ ಮತ್ತು ಮುಧೋಳ ತಾಲೂಕುಗಳಾದ್ಯಂತ ಮೂರು ದಿನಗಳ ಕಾಲ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಡಳಿತ ಆದೇಶ ಹೊರಡಿಸಿದೆ.

**ದಯವಿಟ್ಟು ಯಾರು ಕೂಡ ತಾಳ್ಮೆ ಕಳೆದುಕೊಳ್ಳಬಾರದು: ಸಚಿವ ತಿಮ್ಮಾಪುರ :** ಘಟನೆ ಬಗ್ಗೆ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ತಿಮ್ಮಾಪುರ ಪ್ರತಿಕ್ರಿಯಿಸಿದ್ದು, ಈಗಾಗಲೇ ಡಿಸಿ ಅವರು ಸಕ್ಕರೆ ಕಾರ್ಖಾನೆ ಮಾಲೀಕರು ಮತ್ತು ರೈತರ ಜತೆ ಮೂರರಿಂದ ನಾಲ್ಕು ಬಾರಿ ಸಭೆ ಮಾಡಿದ್ದಾರೆ. ನಾನು ಚರ್ಚೆ ಮಾಡಿ ಬಗೆಹರಿಸುವ ಪ್ರಯತ್ನ ಮಾಡಿದ್ದೇನೆ. ಕೆಲವು ಕಿಡಿಗೇಡಿಗಳು ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚಿದ್ದಾರೆ. ದಯವಿಟ್ಟು ಯಾರು ಕೂಡ ತಾಳ್ಮೆ ಕಳೆದುಕೊಳ್ಳಬಾರದು. ಚರ್ಚೆ ಮಾಡಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡುತ್ತಿದ್ದೇವೆ. ನಾನೂ ರೈತನ ಮಗ, ನನಗೂ ರೈತರ ಕಷ್ಟಗಳು ಗೊತ್ತಿದೆ ಎಂದು ಹೇಳಿದ್ದಾರೆ.

> ಕಬ್ಬಿಗೆ ಈಗಾಗಲೇ ಪ್ರತಿ ಟನ್‌ಗೆ 1300 ರೂ. ದರ ನಿಗದಿ ಮಾಡಲಾಗಿದೆ. ರಾಜ್ಯಾದ್ಯಾಂತ ಏಕರೂಪ ದರ ಇರುತ್ತದೆ. ಹೀಗಾಗಿ ಮುಧೋಳದಲ್ಲಿ ನಡೆದ ಘಟನೆ ದುರದೃಷ್ಟಕರ ಈ ಸಂಬಂಧ ತನಿಖೆಗೆ ಆದೇಶಿಸಲಾಗುವುದು.
> – ಸಿದ್ದರಾಮಯ್ಯ, ಮುಖ್ಯಮಂತ್ರಿ

# ಏತ ನೀರಾವರಿ ಕಾಮಗಾರಿಗೆ 21 ಕೋಟಿ ರೂ.

ಈ ಬಗ್ಗೆ ಚರ್ಚೆ ನಡೆದು ಕಾಮಗಾರಿಗೆ ಅನುಮೋದನೆ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಮದ್ಲಾಪುರ ಏತ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶ ಒಣ ಭೂಮಿಯಾಗಿದೆ. ಅಲ್ಲದೆ ಮಳೆಯನ್ನೇ ಆಶ್ರಯಿಸಿದೆ. ಅಂತರ್ಜಲ ಕೂಡ ಕುಸಿದಿರುವ ಹಿನ್ನೆಲೆಯಲ್ಲಿ ತುಂಗಭದ್ರ ನಾಲೆಯಿಂದ ನೀರು ಹರಿಸಿ ಆ ಮೂಲಕ ಒಣ ಪ್ರದೇಶವನ್ನು ನೀರಾವರಿ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ ಎಂದರು.

**ಗೌರಮ್ಮ ಬಂಡಿ ಏತ ನೀರಾವರಿಗೆ ಅಧಿಕ ಅನುದಾನ:** ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕಿನ ದದ್ದಲ್ ಗ್ರಾಮದ (ಗೌರಮ್ಮ ಬಂಡಿ) ಏತ ನೀರಾವರಿ ಯೋಜನೆಯ ಬಾಕಿ ಕೆಲಸಗಳು ಹಾಗೂ ಪುನರುಜ್ಜೀವನ ಕಾಮಗಾರಿಗಳನ್ನು ರೂ.34.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ತುಂಗಭದ್ರ ಎಡದಂಡೆ ನಾಲೆಯ ವಿತರಣಾ ನಾಲೆ ನಂ.89/9/1 ರಡಿ ಕೊನೆ ಭಾಗದಲ್ಲಿ ಬರುವ ಬಾಧಿತ ಅಚ್ಚುಕಟ್ಟು ಪ್ರದೇಶದಲ್ಲಿ ದದ್ದಲ್, ಕೊರವಿ ಮತ್ತು ಸಾದಾಪುರ ಗ್ರಾಮಗಳಿಗೆ ಸೇರಿದ 3,500 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದರು ಸಚಿವರು ಮಾಹಿತಿ ನೀಡಿದರು.

**ಭಾಲ್ಕಿ ಇನ್ನು ಮುಂದೆ ನಗರಸಭೆ:** ಬೀದರ್ ಜಿಲ್ಲೆಯ ಭಾಲ್ಕಿ ಪುರಸಭೆಯನ್ನು ಮೇಲ್ದರ್ಜೆಗೇರಿಸಿ ನಗರ ಸಭೆಯನ್ನಾಗಿ ರಚಿಸಲು ಸಚಿವ ಸಂಪುಟ ಸಭೆ ನಿರ್ಣಯಿಸಿದೆ. ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ ಕಲಂ–3, 9 ಮತ್ತು 361 ರನ್ವಯ ಶೆಡ್ಯೂಲ್–ಎ ರಲ್ಲಿ ಒಳಗೊಂಡ ಪ್ರದೇಶ ಹಾಗೂ ಶೆಡ್ಯೂಲ್–ಬಿ ರಲ್ಲಿ ಆ ಪ್ರದೇಶದ ಗಡಿರೇಖೆ ಗುರುತಿಸಿರುವಂತೆ ಬೀದರ್ ಜಿಲ್ಲೆಯ ಭಾಲ್ಕಿ ಪುರಸಭೆಯನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸಿ ಭಾಲ್ಕಿ ನಗರಸಭೆ ಪ್ರದೇಶವೆಂದು ಉದ್ಘೋಷಿಸಲು ಸಚಿವ ಸಂಪುಟ ನಿರ್ಣಯಿಸಿದೆ ಎಂದು ಕಾನೂನು ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು.

ಬೀದರ್ ಜಿಲ್ಲೆಯ ಭಾಲ್ಕಿ ಪುರಸಭೆಯಲ್ಲಿ 2011ರ ಜನಗಣತಿ ಪ್ರಕಾರ 40,333 ಜನಸಂಖ್ಯೆ ಇದ್ದು, 14.71 ಚ.ಕಿ.ಮೀ ವಿಸ್ತೀರ್ಣ ಇರುತ್ತದೆ ಮತ್ತು ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ 2,741 ಇದ್ದು, ಕೃಷಿಯೇತರ ಚಟುವಟಿಕೆಗಳು ಶೇ.73 ರಷ್ಟು ಇರುತ್ತದೆ. ಆದ್ದರಿಂದ ಭಾಲ್ಕಿ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾಪಿಸಲಾಗಿತ್ತು. ಇಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ ಎಂದರು.

**ಕಮಲನಗರ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆ:** ಬೀದರ್ ಜಿಲ್ಲೆಯ ಕಮಲ ನಗರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿಯಾಗಿ ಮೇಲ್ದರ್ಜೆಗೇರಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ ಕಲಂ–3, 4, 9, 349, 350, 351 ಮತ್ತು 355 ರನ್ವಯ ಶೆಡ್ಯೂಲ್–ಎ ರಲ್ಲಿ ಒಳಗೊಂಡ ಪ್ರದೇಶ ಹಾಗೂ ಶೆಡ್ಯೂಲ್–ಬಿ ರಲ್ಲಿ ಆ ಪ್ರದೇಶದ ಗಡಿರೇಖೆ ಗುರುತಿಸಲಾಗಿರುವಂತೆ ಬೀದರ್ ಜಿಲ್ಲೆಯ ಕಮಲನಗರ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯನ್ನು ರಚಿಸಿ ಸದರಿ ಪ್ರದೇಶವನ್ನು ಕಮಲನಗರ ಪಟ್ಟಣ ಪಂಚಾಯಿತಿ ಎಂದು ಉದ್ಘೋಷಿಸಲು ಸಚಿವ ಸಂಪುಟ ನಿರ್ಧರಿಸಿದೆ ಎಂದು ಕಾನೂನು ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು.

ಕಮಲನಗರ ಗ್ರಾಮ ಪಂಚಾಯಿತಿಯಲ್ಲಿ 2011ರ ಜನಗಣತಿ ಅನ್ವಯ 12,494 ಜನ ಸಂಖ್ಯೆ ಇದೆ. ಗ್ರಾಮ 22.67 ಚ.ಕಿ.ಮೀ ವಿಸ್ತೀರ್ಣ ಹೊಂದಿದೆ. ಜನಸಾಂದ್ರತೆ ಪ್ರತಿ ಚ.ಕಿ.ಮೀಗೆ 551 ಇದೆ. ಇಲ್ಲಿ ಕೃಷಿಯೇತರ ಚಟುವಟಿಕೆಗಳು ಶೇ.60ರಷ್ಟು ಇರುವುದರಿಂದ ಬೀದರ್ ಜಿಲ್ಲೆಯ ಕಮಲನಗರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾಪಿಸಲಾಗಿತ್ತು. ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ ಪಟ್ಟಣ ಪಂಚಾಯಿತಿಯಾಗಿ ಘೋಷಿಸಲಾಯಿತು ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

### ನವೀನ ಆಡಳಿತ ಮತ್ತು ಅಭಿವೃದ್ಧಿ ಉಪಕ್ರಮ

# ಡಿಸಿ ಬಿ.ಫೌಜಿಯಾ ತರನ್ನುಮ್ ಅವರಿಗೆ ನೀತಿ ಆಯೋಗದಿಂದ ಪ್ರಶಂಸೆ



**• ಸುದ್ದಿಮೂಲ ವಾರ್ತೆ** ಕಲಬುರಗಿ, ನ.13: ನೀತಿ ಆಯೋಗದಿಂದ ಗುರುತಿಸಲ್ಪಟ್ಟ ಜಿಲ್ಲೆಯ ಮಹತ್ವಾಂಕ್ಷೆಯ ತಾಲೂಕುಗಳಾದ ಅಫಜಲಪೂರ, ಶಹಾಬಾದ ಹಾಗೂ ಕಾಳಗಿ ಬ್ಲಾಕ್‌ಗಳಲ್ಲಿ ಸುಸ್ಥಿರ ಪ್ರಗತಿ ಸಾಧಿಸಲು ನವೀನ ಆಡಳಿತ ಮತ್ತು ಅಭಿವೃದ್ಧಿ ಉಪಕ್ರಮಗಳನ್ನು ಜಾರಿಗೊಳಿಸಿದ್ದಕ್ಕಾಗಿ ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರಿಗೆ ನೀತಿ ಆಯೋಗವು ಪ್ರಶಂಸನೆ ವ್ಯಕ್ತಪಡಿಸಿದೆ.

ಭಾರತ ಸರ್ಕಾರದ ರಾಜ್ಯಗಳಿಗೆ ನೀತಿ–ರಾಜ್ಯ ಬೆಂಬಲಿತ ಮಿಷನ್ ಅಡಿಯಲ್ಲಿ ಜಿಲ್ಲೆಯ ಬ್ಲಾಕ್‌ಗಳಲ್ಲಿ ಸಮಗ್ರ ಶಿಕ್ಷಾ ಅಭಿಯಾನದ ಅಡಿಯಲ್ಲಿ ಉಪಕ್ರಮಗಳು ಮತ್ತು ಮಣ್ಣಿನ ಆರೋಗ್ಯವನ್ನು ಮರುಸ್ಥಾಪನೆ ಹೀಗೆ ಎರಡು ವಲಯದಲ್ಲಿ ಜಿಲ್ಲೆಯ ಅಸಾಧಾರಣ ಅನುಷ್ಠಾನ ಸಾಧನ ಮತ್ತು ಉತ್ತಮ ಅಭ್ಯಾಸಗಳನ್ನು ಗುರುತಿಸಿ ನೀತಿ ಆಯೋಗವು ಮೆಚ್ಚುಗೆ ವ್ಯಕ್ತಪಡಿಸಿದೆ. ಈ ಕುರಿತು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರಿಗೆ ಪ್ರತ್ಯೇಕವಾಗಿ ಎರಡು ವಲಯದಲ್ಲಿನ ಸಾಧನೆಗೆ ನೀತಿ ಆಯೋಗದ ಸಿ.ಇ.ಓ ಅವರು ಮೆಚ್ಚುಗೆಯ ಪ್ರಮಾಣ ಪತ್ರಗಳನ್ನು ನೀಡಿದ್ದಾರೆ.

ಶಿಕ್ಷಣ, ಕಲಿಕಾ ಫಲಿತಾಂಶಗಳು, ಡಿಜಿಟಲ್ ಕಲಿಕೆಯ ಪ್ರವೇಶ ಮತ್ತು ಸಮಗ್ರ ಶಾಲಾ ಅಭಿವೃದ್ಧಿಯನ್ನು ಬಲಪಡಿಸಲು ಕಲಬುರಗಿಯ ಪ್ರಯತ್ನ ಮತ್ತು ವಿನೂತನ ಉಪಕ್ರಮಗಳು ಅಳವಡಿಸಿಕೊಂಡಿದ್ದರಿಂದ ಸಮಗ್ರ ಶಿಕ್ಷಾ ಅಭಿಯಾನದ ಅಡಿಯಲ್ಲಿ ಮೆಚ್ಚುಗೆಗೆ ಕಾರಣವಾಗಿದೆ.

ಅದೇ ರೀತಿ ಕೃಷಿ ಮತ್ತು ಸಂಬಂಧಿತ ಸೇವೆಗಳನ್ನು ಸುಧಾರಿಸಿ ಸುಸ್ಥಿರ ಮಣ್ಣಿನ ನಿರ್ವಹಣೆ, ಕಾಲಮಿತಿಯಲ್ಲಿ ಅನ್ನದಾತರಿಗೆ ಮಣ್ಣಿನ ಆರೋಗ್ಯ ಕಾರ್ಡ್ ವಿತರಣೆ, ಸಾವಯವ ಕೃಷಿಗೆ ಪ್ರೋತ್ಸಾಹ ಮತ್ತು ಸುಧಾರಿತ ಕೃಷಿ ಉತ್ಪಾದಕತೆಗೆ ಜಿಲ್ಲೆಯ ಹೆಚ್ಚಿನ ಒತ್ತು ನೀಡಿದ್ದಕ್ಕಾಗಿ ಮಣ್ಣಿನ ಆರೋಗ್ಯ ಪುನ:ಸ್ಥಾಪಿಸುವ ವಿಭಾಗದಲ್ಲಿ ಜಿಲ್ಲೆ ಪ್ರಶಂಸನೆಗೆ ಒಳಗಾಗಿದೆ. ಇದು ಜಿಲ್ಲೆಯ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿ, ನಾವೀನ್ಯತೆ–ಚಾಲಿತ ಆಡಳಿತಕ್ಕೆ ಜಿಲ್ಲೆಯ ಬದ್ಧತೆಯನ್ನು ಒತ್ತಿಹೇಳುತ್ತಿದೆ.

ನೀತಿ ಫಾರ್ ಸ್ಟೇಟ್ಸ್–ಸ್ಟೇಟ್ ಸಪೋರ್ಟ್ ಮಿಷನ್ ಯೋಜನೆಯು ಭಾರತದ ಅಭಿವೃದ್ಧಿ ಗುರಿಗಳನ್ನು ವೇಗಗೊಳಿಸಲು ರಾಜ್ಯಗಳು ಮತ್ತು ಜಿಲ್ಲೆಗಳಲ್ಲಿ ಜ್ಞಾನ ವಿನಿಮಯವನ್ನು ಉತ್ತೇಜಿಸುವ ಮೂಲಕ ಯಶಸ್ವಿ ಸ್ಥಳೀಯ ನಾವೀನ್ಯತೆಗಳನ್ನು ಗುರುತಿಸುವ ಮತ್ತು ಅಳೆಯುವ ಗುರಿಯನ್ನು ಹೊಂದಿದೆ. ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರ ನಾಯಕತ್ವ ಮತ್ತು ಅವರ ತಂಡದ ಸಮರ್ಪಿತ ಪ್ರಯತ್ನಗಳು ಮಹತ್ವಾಕಾಂಕ್ಷೆಯ ಜಿಲ್ಲೆಗಳು ಮತ್ತು ಬ್ಲಾಕ್‌ಗಳ ಕಾರ್ಯಕ್ರಮದ ಅಡಿಯಲ್ಲಿ ಪರಿವರ್ತನಾತ್ಮಕ ಮತ್ತು ಸುಸ್ಥಿರ ಅಭಿವೃದ್ಧಿಯತ್ತ ಶ್ರಮಿಸುತ್ತಿರುವ ಇತರ ಜಿಲ್ಲೆಗಳಿಗೆ ಸ್ಫೂರ್ತಿದಾಯಕವಾಗಿದೆ ಎಂದು ನೀತಿ ಆಯೋಗ ಪ್ರಶಂಸಿದೆ.

## ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ.,

ಮುಖ್ಯ ಶಾಖೆ ಮಸ್ಕಿ

**ವಾಹನದ ಬಹಿರಂಗ ಹರಾಜು ಪ್ರಕಟಣೆ**

ಈ ಕೆಳಗೆ ಕಾಣಿಸಿದ ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಪ್ರಧಾನ ಕಛೇರಿ ಮಸ್ಕಿ, : ಮುಖ್ಯ ಶಾಖೆ ಮಸ್ಕಿ ಹಾಗೂ ಸಿರುಗುಪ್ಪ ಶಾಖೆಯ ಸಾಲಗಾರರು ವಾಹನ ಅಡವಿಟ್ಟು ಹೊಸ ವಾಹನ ಸಾಲ ಪಡೆದಿರುತ್ತಾರೆ. ಈಗ ಸಾಲ ತುಂಬಲು ವಿಫಲರಾದ ಕಾರಣ ಸಾಲಗಾರರು ಸಹಕಾರಿಗೆ ಅಡವಿಟ್ಟ ವಾಹನವನ್ನು ಸಹಕಾರಿ ವಶಕ್ಕೆ ಪಡೆಯಲಾಗಿದೆ. ಈಗ ಸದರಿ ವಾಹನವನ್ನು ''ಇದ್ದ ಸ್ಥಿತಿಯಲ್ಲಿ ಇದ್ದ ಹಾಗೇ'' ದಿನಾಂಕ 21.11.2025 ರಂದು ಶುಕ್ರವಾರ ಬೆಳಿಗ್ಗೆ 11.30 ಘಂಟೆಗೆ ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮುಖ್ಯ ಶಾಖೆ ಮಸ್ಕಿ ಇಲ್ಲಿ ವಾಹನ ಬಹಿರಂಗ ಹರಾಜು ಹಾಕಲಾಗುವುದು.

| ಕ್ರ. ಸಂ. | ಸಾಲಗಾರರ ಹೆಸರು | ಖಾತೆ ಸಂಖ್ಯೆ | ವಾಹನದ ವಿವರ | ಮುಕ್ತಾಯದ ಮೊತ್ತ(ರೂ.) ದಿನಾಂಕ : 11.11.2025 ಕ್ಕೆ ಇದ್ದಂತೆ |
|---|---|---|---|---|
| 01 | ಶ್ರೀ ರಮೇಶ ತಂ।। ಮಲ್ಲಪ್ಪ ಸಾ।। 15ನೇ ವಾರ್ಡ ಪಿಂಜಾರ ಓಣಿ ಮಸ್ಕಿ ತಾ।। ಮಸ್ಕಿ ಜಿ।। ರಾಯಚೂರು | 2090–156 | UNICORN Model:2023 Vehicle No:KA36HC5964 Eng No:KC40EG3072581 Ch, No:ME4KC404LPG072435 Colour: IMPERIAL RED | 1,09,772/– |
| 02 | ಶ್ರೀ ನಿಟ್ಟೂರು ಹನುಮಂತ ತಂ।। ತಿಮ್ಮಪ್ಪ ಸಾ।। ನಾಯಕರ ಓಣಿ ಹೆರಕಲ್ ತಾ।। ಸಿರುಗುಪ್ಪ ಜಿ।। ಬಳ್ಳಾರಿ | 4090–506 | PULSAR 125 Model:2023 Vehicle No. KA34ET0234 Eng. No.DHXWPG85790 Ch. No.MD2B68BX0PWG03664 Colour : SPRAKLING MET | 35,694/– |

ಆಸಕ್ತಿಯುಳ್ಳ ಬಿಡ್ಡುದಾರರು ಇ.ಎಮ್.ಡಿ ಹಣ ರೂ.5000/– ಪಾವತಿಸಿ ಲಿಲಾವಿನಲ್ಲಿ ಭಾಗವಹಿಸಬಹುದು. ಲಿಲಾವಿನಲ್ಲಿ ವಾಹನ ಪಡೆದ ಯಶಸ್ವಿ ಬಿಡ್ಡುದಾರರು ತಕ್ಷಣ ಸಂಪೂರ್ಣ ಹಣವನ್ನು ಭರಿಸಿ ವಾಹನವನ್ನು ತಮ್ಮ ವಶಕ್ಕೆ ಪಡೆದುಕೊಳ್ಳಬೇಕು. ತಪ್ಪಿದ್ದಲ್ಲಿ ಮುಂಗಡ ಭರಿಸಿದ ಹಣ ಫಾರಫೀಟ್ ಮಾಡಲಾಗುತ್ತದೆ. ಲಿಲಾವನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ, ನಿರಾಕರಿಸುವ ಅಥವಾ ಮುಂದೂಡುವ ಹಕ್ಕನ್ನು ಶಾಖಾ ವ್ಯವಸ್ಥಾಪಕರು ಕಾಯ್ದಿರಿಸಿಕೊಂಡಿರುತ್ತಾರೆ.

**ಸೂಚನೆ :** ವಾಹನವನ್ನು ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ. ಮುಖ್ಯಶಾಖೆ ಮಸ್ಕಿ ಇಲ್ಲಿ ವೀಕ್ಷಿಸಬಹುದಾಗಿದೆ.

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :** 08537–295707, 7022900823, 8660789523.

**ಸ್ಥಳ :** ಮಸ್ಕಿ.
**ದಿನಾಂಕ :** 13.11.2025.

ಸಹಿ/–
ಶಾಖಾ ವ್ಯವಸ್ಥಾಪಕರು,
ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ.,
ಮುಖ್ಯ ಶಾಖೆ ಮಸ್ಕಿ ಹಾಗೂ ಸಿರುಗುಪ್ಪ.

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ಉಪ ನಿಬಂಧಕರು (ನಿ.,441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ''ಸೌಹಾರ್ದ ಸಹಕಾರಿ ಸೌಧ''**
#68, 1ನೇ ಮಹಡಿ, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

**ವಾದಿ : ಮುಖ್ಯ ಕಾರ್ಯನಿರ್ವಾಹಕರು,**
ತುಂಗಭದ್ರಾ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು–584128.
**ಪ್ರತಿವಾದಿಗಳು :**
**ವ್ಯಾಜ್ಯ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೇ.ಸಂ.ಸ.ನಿ../1014/2025–26**
**1. ಶ್ರೀ ರಾಜು ಯಾದವ ತಂದೆ ಶೈಲೇಂದ್ರ ಯಾದವ.**
ವಾರ್ಡ ನಂ.11, ಮೈಲಾಪುರ ರಸ್ತೆ, ಸಾ।।ತುರವಿಹಾಳ, ಪೋ।। ತುರವಿಹಾಳ, ತಾ।। ಸಿಂಧನೂರು, ಜಿ।। ರಾಯಚೂರು–584122, ಪೋ.ನಂ.6363457459.

**ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/1014/2025–26 ರಂತೆ ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಆಧಿನಿಯಮ ರಲ್ಲಿ 39 ರಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ, ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿನಾಂಕ : 17.11.2025. ರಂದು ಬೆಳಿಗ್ಗೆ : 11–30 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪುಕಟಣೆಯನ್ನು ದಿನಾಂಕ : 04.11.2025 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/–
**ಸಹಕಾರ ಸಂಘಗಳ ಉಪ ನಿಬಂಧಕರು (ನಿ.441)**
**ದಾವಾ ಪಂಚಾಯ್ತಿ ನ್ಯಾಯಾಲಯ**
**ಕ.ರಾ.ಸೌ.ಸಂ.ಸ.ನಿ, ಬೆಂಗಳೂರು**
**(ನ್ಯಾಯಾಲಯದ ಆದೇಶದ ಮೇರೆಗೆ)**

ಸುದ್ದಿಮೂಲ
ಕಲ್ಯಾಣ ಕರ್ನಾಟಕದ ಕ್ಷಣ ಕ್ಷಣದ ಸಮಗ್ರ ಸುದ್ದಿಗಳನ್ನು Suddimoola App ನಲ್ಲಿ ನಿಮ್ಮ ಸ್ಮಾರ್ಟ್‌ಫೋನ್‌ನಲ್ಲಿ ವೀಕ್ಷಿಸಬಹುದು. ಇದನ್ನು Google Playstore ಮೂಲಕ ಡೌನ್ ಲೋಡ್ ಮಾಡಿ ಕೊಳ್ಳಬಹುದು.

**AFFIDAVIT**

I, Harish Kurmar S/o Pulipati Venkata Satya Umamaheshwar Rao Aged : 50 Years, Occ : Employed as Accounts Officer in M/s Venkata Sai Traders, Manvi, Karnataka. R/o Ward No.4, Near Milton School, Manvi, Dist : Raichur, Karnataka. I Changed My Name as **HARISH KUMAR** (Old Name) to **PULIPATI HARISH KUMAR** (New Name). In my Records such as Aadhar and Pan Card as **PULIPATI HARISH KUMAR**. My Initial Name treated as PULIPATI as First Name, HARISH as Second Name, KUMAR as Last Name. The above said contents are true and sworn before Notary H. PAMPANNA at Raichur on 07-11-2025

Innovating for affordable healthcare

## SHILPA MEDICARE LIMITED.

Registered office # 12-6-214/A-1, Hyderabad Road, Raichur-584135
Website - www.vbshilpa.com, Email - info@vbshilpa.com. ,Telephone -+91-8532-238704
CIN No. - L85110KA1987PLC008739

**Extract of the Standalone and Consolidated unaudited Financial Results for the Quarter Ended 30.09.2025**

(In Lakhs)

STANDALONE

| Sl. No. | Particulars | Quarter ended 30-09-2025 (UNAUDITED) | Quarter ended 30.06.2025 (UNAUDITED) | Quarter ended 30.09.2024 (UNAUDITED) | Half year ended 30.09.2025 (UNAUDITED) | Half year ended 30.09.2024 (UNAUDITED) | Previous Year ended 31-03-2025 (AUDITED) |
|---|---|---|---|---|---|---|---|
| 1 | Total Income from Operations | 13,493.28 | 9,243.31 | 12,968.24 | 22,736.59 | 22,580.18 | 47,734.20 |
| 2 | Net Profit before tax, non controlling interest & share in profit /(loss) of joint venture / associates (before exceptional items) | 4,049.01 | 1,996.53 | 5,062.03 | 6,045.54 | 9,130.46 | 15,106.93 |
| 3 | Net Profit before tax , non controlling interest & share in profit /(loss)of joint venture/associates (after exceptional items) | 3,892.37 | 1,478.50 | 5,014.90 | 5,370.87 | 9,037.33 | 10,533.12 |
| 4 | Net Profit after tax , non controlling interest & share in profit /(loss)of joint venture / associates (after exceptional items) | 3,082.83 | 2,069.73 | 2,999.18 | 5,152.55 | 5,787.33 | 6,789.63 |
| 5 | **Total Income (including other comprehensive income /(loss))** | **3,082.83** | **2,069.73** | **2,999.18** | **5,152.55** | **5,787.33** | **6,595.32** |
| 6 | Equity Share Capital | 977.91 | 977.91 | 977.91 | 977.91 | 977.91 | 977.91 |
| 7 | Reserves (excluding Revaluation Reserve) as shown in the Audited Balance Sheet i.e Other Equity | - | - | - | - | - | 263,715.68 |
| 8 | Earnings Per Share (of Rs. 1/- each)(for continuing operations) -(in Rs) | (Not annualised) | (Not annualised) | (Not annualised) | (Not annualised) | (Not annualised) | (Annualised) |
| | 1) Basic: | 1.58 | 1.06 | 1.53 | 2.63 | 2.98 | 3.48 |
| | 2) Diluted: | 1.58 | 1.06 | 1.53 | 2.63 | 2.98 | 3.48 |

CONSOLIDATED

| Sl. No. | Particulars | Quarter ended 30-09-2025 (UNAUDITED) | Quarter ended 30.06.2025 (UNAUDITED) | Quarter ended 30.09.2024 (UNAUDITED) | Half year ended 30.09.2025 (UNAUDITED) | Half year ended 30.09.2024 (UNAUDITED) | Previous Year ended 31-03-2025 (AUDITED) |
|---|---|---|---|---|---|---|---|
| 1 | Total Income from Operations | 36,996.88 | 32,145.74 | 34,379.74 | 69,142.62 | 63,630.79 | 128,641.41 |
| 2 | Net Profit before tax, non controlling interest & share in profit /(loss) of joint venture / associates (before exceptional items) | 6,442.97 | 4,958.01 | 3,676.98 | 11,401.00 | 6,544.94 | 15,041.45 |
| 3 | Net Profit before tax , non controlling interest & share in profit /(loss)of joint venture/associates (after exceptional items) | 6,442.97 | 4,958.01 | 3,676.98 | 11,401.00 | 6,544.94 | 12,233.31 |
| 4 | Net Profit after tax , non controlling interest & share in profit /(loss)of joint venture / associates (after exceptional items) | 4,406.67 | 4,688.57 | 1,793.76 | 9,095.26 | 3,199.99 | 7,829.32 |
| 5 | **Total Income (including other comprehensive income /(loss))** | **4,403.11** | **4,685.01** | **1,796.61** | **9,088.14** | **3,205.69** | **7,599.24** |
| 6 | Equity Share Capital | 977.91 | 977.91 | 977.91 | 977.91 | 977.91 | 977.91 |
| 7 | Reserves (excluding Revaluation Reserve) as shown in the Audited Balance Sheet i.e Other Equity | - | - | - | | - | 235,291.68 |
| 8 | Earnings Per Share (of Rs. 1/- each)(for continuing operations) -(in Rs) | (Not annualised) | (Not annualised) | (Not annualised) | (Not annualised) | (Not annualised) | (Annualised) |
| | 1) Basic: | 2.25 | 2.40 | 0.92 | 4.65 | 1.65 | 4.02 |
| | 2) Diluted: | 2.25 | 2.40 | 0.92 | 4.65 | 1.65 | 4.02 |

Notes:
1 The above is an extract of the detailed format of unaudited financial results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of the unaudited financial results are available on the Investor section of our website www.vbshilpa.com and under corporate section of BSE Limited and National Stock Exchange of India Limited.
2 The above results have been reviewed by the Audit Committee and approved by the Board of Director at its meeting held on 13th November, 2025

For and on behalf of the Board of Directors
Sd/-
Omprakash Inani
**Chairman**

Date: 13/11/2025
Place Raichur